# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೆಂಪೇಗೌಡನಗರ ಉಪವಿಭಾಗ
ಚಿಕ್ಕಪೇಟೆ ವಿಭಾಗ, ಬೆಂಗಳೂರು.

ಸ.ಕಾ.ನಿ.ಅ(ಕೆ.ಗೌ.ನ)/ಪಿ.ಆರ್/ 695 /2021-22, ದಿನಾಂಕ : 9/3/2022

ದಿನಾಂಕ: 05-03-2022 ರಂದು ಈ ಉಪವಿಭಾಗದ ವಾರ್ಡ್ ಸಂಖ್ಯೆ: 143ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

| ಕ್ರ. ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ. ಉಮಾಶಂಕರ್ | ನೋಡಲ್ ಅಧಿಕಾರಿಗಳು ಹಾಗೂ ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ) | 9480684418 |
| 2 | ಶ್ರೀ. ಸಿ.ಲಿಂಗರಾಜೇಗೌಡ | ಕಾರ್ಯದರ್ಶಿ ಹಾಗೂ ಕಿರಿಯ ಅಭಿಯಂತರರು ವಾರ್ಡ್ ಸಂಖ್ಯೆ:143 | 9480688143 |
| 3 | ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 8217636732 |
| 4 | ಶ್ರೀ.ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9901066586 |
| 5 | ಎಂ.ಎಂ.ವಿ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448387878 |
| 6 | ಚಿಕ್ಕಣ್ಣ ಗಾರ್ಡನ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448508638 |
| 7 | ಶ್ರೀ.ನರಸಿಂಹ | ಕಿ.ಆ.ಪ | 9964177663 |
| 8 | ಶ್ರೀ.ಜೈ ಪ್ರಕಾಶ್ | Marshal | |
| 9 | ಶ್ರೀ.ಟಿ.ಆಂಜನೇಯ | ಹಿ.ಆ.ಪ | 9880052188 |
| 10 | ಶ್ರೀ.ಎಸ್. ಹೇಮಂತ್‌ಕುಮಾರ್ | ಸ.ಅ(ವಿದ್ಯುತ್) | 9449870535 |
| 11 | ಶ್ರೀ. ಧನಂಜಯ | Tax Inspector Ward-143 | 7353149050 |

ದಿನಾಂಕ 05-03-2022 ರಂದು ನಡೆದ ವಾರ್ಡ್ -143 ರ ಸಮಿತಿ ಸಭೆಯ ನಡಾವಳಿಗಳು:

ಮೊದಲು ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ರವರು ಸಭೆಯಲ್ಲಿ ಹಾಜರಿದ್ದ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇನ್‌ಗಳ ಸದಸ್ಯರೂಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸಿದರು ಹಾಗೂ ನೂತನವಾಗಿ ನಿಯೋಜನೆಗೊಂಡಿರುವ ವಾರ್ಡ್‌ನ ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳಾದ ಶ್ರೀ.ಲಿಂಗರಾಜೇಗೌಡ ರವರನ್ನು ಸಭೆಗೆ ಪರಿಚಯಿಸಿದರು ಮತ್ತು ನಾಡವಳಿಗಳನ್ನು ದಾಖಲಿಸುವಂತೆ ನೂತನ ಅಭಿಯಂತರರಿಗೆ ಸೂಚಿಸಿದರು.

ನಂತರದಲ್ಲಿ ರಾಮಯ್ಯಂಗಾರ್ ರಸ್ತೆಯ ಶ್ರೀ.ಓ.ವಿ.ಜಯಕುಮಾರ್ ರವರು ಮಾತನಾಡಿ ಸಜ್ಜನ್‌ರಾವ್ ವೃತ್ತದ ಬಳಿ ಇರುವ ಐಲ್ಯಾಂಡ್‌ನಲ್ಲಿ ಪಾರಿವಳಾಗಳಿಗೆ ಆಹಾರ ಧಾನ್ಯಗಳನ್ನು ಹಾಕುವುದನ್ನು ತಡೆಯಲು ಮಾರ್ಷಲ್‌ಗಳನ್ನು ನೇಮಿಸುವಂತೆ ಹಾಗೂ ಐಲ್ಯಾಂಡ್ ಸುತ್ತಲೂ 8 ಅಡಿ ಎತ್ತರದ ಶೀಟ್‌ಗಳನ್ನು ಅಳವಡಿಸಿ ಪಾರಿವಾಳಗಳು ಬರದಂತೆ ಮಾಡಬೇಕೆಂದು ಕೋರಿದರು. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಮಾರ್ಷಲ್ ಹಾಗೂ ಆರೋಗ್ಯ ಪರಿವೀಕ್ಷಕರಿಗೆ ಮಾನ್ಯ ನೋಡಲ್ ಅಧಿಕಾರಿಗಳು ಸೂಚಿಸಿದರು.

ನಂತರ ಎಂ.ಎಂ.ವಿ.ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೋಷನ್‌ನ ಶ್ರೀ. ವೆಂಕಟೇಶ್ ರವರು ಮಾತನಾಡಿ ಈ ಹಿಂದೆಯೇ ಪ್ರಸ್ತಾಪಿಸಿದ್ದ ಈ ಕೆಳಕಂಡ ವಿಷಯಗಳ ಬಗ್ಗೆ ಕ್ರಮಕ್ಕೆ ಕೋರಿದರು.

1. ಡಯಾನಗಲ್ ರಸ್ತೆಯ ಪಾದಚಾರಿ ಮಾರ್ಗವನ್ನು ಸರಿಪಡಿಸುವುದು,
2. ವಾಸವಿ ದೇವಸ್ಥಾನದ ರಸ್ತೆಯ ವೈಟ್ ಟಾಪಿಂಗ್ ಕಾಮಗಾರಿಯು ಮುಗಿದ್ದು ಎರಡು ಕಡೆ ಕಾಂಕ್ರೀಟ್ ಹಾಕದಿರುವ ಬಗ್ಗೆ.
3. ನ್ಯಾಷನಲ್ ಹೈ ಸ್ಕೂಲ್ ರಸ್ತೆ ಹಾಗೂ ಎಂ.ಎಂ.ವಿ. ರಸ್ತೆಗಳನ್ನು ಸೇರುವ ಸ್ಥಳದಲ್ಲಿ ರಸ್ತೆ ಉಬ್ಬನ್ನು (Road hump) ಅನ್ನು ಅಳವಡಿಸುವುದು,
4. ಎಂ.ಎಂ.ವಿ.ರಸ್ತೆಯ ಹಿಂಭಾಗದ ಕನ್ಸರ್‌ವೆನ್ಸಿಯಲ್ಲಿರುವ ಶೆಡ್‌ಅನ್ನು ಮತ್ತು ಡೆಬ್ರೀಸನ್ನು ತೆಗೆದು ಸ್ವಚ್ಛ ಮಾಡುವುದು.

ಈ ಎಲ್ಲಾ ವಿಷಯಗಳ ಬಗ್ಗೆ ಮಾನ್ಯ ನೋಡಲ್ ಅಧಿಕಾರಿಗಳು ಚರ್ಚಿಸಿ ಕ್ರಮ ಸಂಖ್ಯೆ (1) ರಿಂದ (3) ರವರಗಿನ ವಿಷಯಗಳ ಬಗ್ಗೆ ಸೂಕ್ತ ಕ್ರಮ ವಹಿಸಲು ಮುಖ್ಯ ರಸ್ತೆಗಳು ಹಾಗೂ ಮೂಲಭೂತ

ಸೌಕರ್ಯ ವಿಭಾಗದ ಅಧಿಕಾರಿಗಳನ್ನು ಕೋರುವುದಾಗಿ ಮತ್ತು ಕ್ರಮ ಸಂಖ್ಯೆ: 4 ಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಮ ವಹಿಸಲು ವಾರ್ಡ್‌ನ ಅಭಿಯಂತರರಿಗೆ ಸೂಚಿಸಿದರು.

ನಂತರ ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ ಶ್ರೀ.ರಾಜು ರವರು ಮಾತನಾಡಿ ಈ ಕೆಳಕಂಡ ವಿಷಯಗಳ ಬಗ್ಗೆ ಸೂಕ್ತ ಕ್ರಮವಹಿಸುವಂತೆ ಕೋರಿದರು.

1. ಆರ್.ವಿ.ರಸ್ತೆ ಟೀಚರ್ಸ್ ಕಾಲೇಜ್ ಬಳಿ ಬಸ್ ಶೆಲ್ಟರ್ ನಿರ್ಮಿಸುವುದು.
2. ಎಂ.ಎನ್. ಕೃಷ್ಣರಾವ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಬೋಲ್ಯಾರ್ಡ್ಸ್‌ಗಳನ್ನು (bollards) ಗಳು ಹಾಕುವುದು.
3. ಶ್ರೀರಾಮ ಮಂದಿರ ರಸ್ತೆಯ ಕನ್ಸರ್‌ವೆನ್ಸಿಯಲ್ಲಿರುವ ಹಸು ಸಾಕಾಣಿಕೆ ಶೆಡ್‌ಅನ್ನು ತೆರವುಗೊಳಿಸುವುದು.
4. ಸರ್ವೇಯರ್ ರಸ್ತೆಯ ಕನ್ಸರ್‌ವೆನ್ಸಿಯಲ್ಲಿರುವ ನಾನ್‌ವೆಜ್ ಹೋಟೆಲ್ ಅನ್ನು ತೆರವುಗೊಳಿಸುವುದು.
5. ಸರ್ವೇಯರ್ ರಸ್ತೆಯ ಹಾರ್ಡ್‌ವೇರ್ ಶಾಪ್‌ನ ಕಟ್ಟಡದ ಮಾಲೀಕರು ಕನ್ಸರ್‌ವೆನ್ಸಿಯಲ್ಲಿ ಹಾಕಿರುವ ಗೋಡೆಯನ್ನು ತೆರವುಗೊಳಿಸುವುದು.
6. ಕೆ.ಆರ್.ರಸ್ತೆಯಲ್ಲಿರುವ ಪಾದಚಾರಿ ಮಾರ್ಗದಲ್ಲಿರುವ ನರ್ಸರಿಯನ್ನು ತೋರುವುದು.

ಈ ಮೇಲಿನ ವಿಷಯಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಟ್ರಾಫಿಕ್ ಇಂಜಿನಿಯರಿಂಗ್ ಸೆಲ್‌ನ ಅಧಿಕಾರಿಗಳು, ವಾರ್ಡ್‌ನ ಅಭಿಯಂತರರು ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ಸೂಚಿಸಿದರು.

ನಂತರ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೋಷನ್ ಸದಸ್ಯರುಗಳು ಒಟ್ಟಾಗಿ ಹಸಿಕಸ ಮತ್ತು ಒಣ ಕಸ ಬೇರ್ಪಡಿಸಿ ಸಂಗ್ರಹಿಸುವಂತೆ ಮತ್ತು ತೆಂಗಿನಗರಿ ತ್ಯಾಜ್ಯಗಳನ್ನು ಸಮರ್ಪಕವಾಗಿ ವಿಲೇವಾರಿ ಮಾಡುವಂತೆ ಕೋರಿದರು, ಆಗ ನೋಡಲ್ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ವಾರ್ಡ್‌ನ ಆರೋಗ್ಯ ಪರಿವೀಕ್ಷಕರಿಗೆ ಕಸವನ್ನು ಬೇರ್ಪಡಿಸಿ ಸಂಗ್ರಹಿಸಿ ವಿಲೇವಾರಿ ಮಾಡುವಂತೆ ಸೂಚಿಸಿದರು.

ನಂತರ ಕಾರ್ಯದರ್ಶಿಗಳ ವಂದನಾರ್ಪಣೆಯೊಂದಿಗೆ ವಾರ್ಡ್ ಸಮಿತಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ –143 ವಿ. ವಿ.ಪುರಂ

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 143 ಹಾಗೂ
ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ)